# ಮರೆಯಲಾಗದ ‘ಪಿಲ್ಲಲಮರ್ರಿ’

**ಪಿಲ್ಲಲಮರ್ರಿ ಹೆಸರೇ ವಿಚಿತ್ರವಾಗಿದೆಯಲ್ಲ ಅಲ್ಲೇನಿದೆ ಎಂದು ನೋಡುವ ಕುತೂಹಲದಿಂದ ಒಂದು ಭಾನುವಾರ ಊಟದ ಬುತ್ತಿಯೊಂದಿಗೆ ಹೋದೆವು. ಅದೊಂದು ದೊಡ್ಡ ಆಲದ ಮರ. ದೈತ್ಯಗಾತ್ರದಲ್ಲಿ ಹಬ್ಬಿರುವ ಆಲದ ಮರ ನೋಡುವುದು ಕಣ್ಣಿಗೆ ಹಬ್ಬ. ಈ ಪಯಣದ ಸವಿನೆನಪು ಸದಾ ಹಸಿರು.**

■ ಚಿತ್ರ-ಬರಹ: ಶಾಲಿನಿ ನಾಯಕ್



ಬಾಲ್ಯದ ನೆನಪು, ಪ್ರವಾಸದ ಅನುಭವ ಸದಾ ನೆನಪಿನಂಗಳದಲ್ಲಿ ಹಸಿರಾಗಿರುತ್ತದೆ. ಮೆಲುಕು ಹಾಕಿದಾಗ ಸುಖಾನುಭವ ನೀಡುತ್ತದೆ.

1995 ರಲ್ಲಿ ನನ್ನವರಿಗೆ ಕೆಲಸದ ಮೇಲೆ ಈಗಿನ ತೆಲಂಗಾಣ ರಾಜ್ಯದ ಮೆಹಬೂಬನಗರ ಜಿಲ್ಲೆಯ ದೇವರಕದ್ರ ಎಂಬಲ್ಲಿಗೆ ವರ್ಗಾವಣೆಯಾಯಿತು. ನಾವು ಮೆಹಬೂಬನಗರದಲ್ಲಿ ಮನೆ ಮಾಡಿಕೊಂಡಿದ್ದೆವು. ಅಲ್ಲಿ ನಮ್ಮ ಮಗನನ್ನು ಮೊದಲ ಬಾರಿಗೆ ಶಾಲೆಗೆ ಸೇರಿಸಿದೆವು. ಹೊಸ ಊರು, ಗೊತ್ತಿಲ್ಲದ ಭಾಷೆ ನಮ್ಮನ್ನು ಎಲ್ಲೋ ತಂದು ಬಿಟ್ಟಂತಾಗಿತ್ತು. ನನ್ನವರಿಗೆ ಮತ್ತು ಮಗನಿಗೆ ರಜೆ ಇದ್ದಾಗ ಸುತ್ತಾಡಿ ಬರಲು ಯಾವುದಾದರೂ ಪ್ರೇಕ್ಷಣೀಯ ಸ್ಥಳಗಳು ಇವೆಯೇ ಎಂದು ಸುತ್ತಲಿನವರನ್ನು ವಿಚಾರಿಸಿದಾಗ ಪಿಕ್‌ನಿಕ್ ಹೋಗಿ ಬರುವ ಒಂದು ಜಾಗ ಇದೆ ಅದರ ಹೆಸರು ಪಿಲ್ಲಲಮರ್ರಿ (Pillalamarri) ಎಂದರು.

ಪಿಲ್ಲಲಮರ್ರಿ ಹೆಸರೇ ವಿಚಿತ್ರವಾಗಿದೆಯಲ್ಲ ಅಲ್ಲೇನಿದೆ ಎಂದು ಕೇಳಲಾಗಿ ದೊಡ್ಡದೊಂದು ಆಲದ ಮರ ಇದೆ. ಅದರ ಬಿಳಲುಗಳು ಮತ್ತು ಕೊಂಬೆಗಳಿಂದ ಹೊಸ ಹೊಸ ಮರಗಳು ಹುಟ್ಟಿ ನಾಲ್ಕು ಎಕರೆ ವಿಸ್ತೀರ್ಣಕ್ಕೆ ಅದು ಹಬ್ಬಿಕೊಂಡಿದೆ ಎಂದರು. ನಮ್ಮ ಕುತೂಹಲ ಹೆಚ್ಚಾಯಿತು. ಅಷ್ಟೊಂದು ದೊಡ್ಡ ಆಲದ ಮರವೇ.... ನೋಡಿಯೇ ಬಿಡೋಣ ಎಂದು ಒಂದು ಭಾನುವಾರ ಊಟದ ಬುತ್ತಿಯೊಂದಿಗೆ ನಮ್ಮ ಸವಾರಿ ಪಿಲ್ಲಲಮರ್ರಿಯತ್ತ ಹೊರಟಿತು.

ತೆಲುಗು ಭಾಷೆಯಲ್ಲಿ ಮರ್ರಿ ಎಂದರೆ ಆಲದ ಮರ. ಪಿಲ್ಲಲು ಅಂದರೆ ಮಕ್ಕಳು ಅಥವಾ ಮರಿಗಳು ಎಂದರ್ಥ. ಹಾಗಾಗಿ ಮರಿಗಳ ಆಲದ ಮರ ಪಿಲ್ಲಲಮರ್ರಿ ಆಗಿದೆ. ಮೆಹಬೂಬನಗರದಿಂದ ಸುಮಾರು ನಾಲ್ಕು ಕಿ.ಮಿ ದೂರದಲ್ಲಿ ಈ ಆಲದ ಮರವಿದೆ. ದೈತ್ಯಗಾತ್ರದಲ್ಲಿ ಅದು ಹಬ್ಬಿದೆ. ಅದರಿಂದ ಇಳಿದ ಬಿಳಲುಗಳು ನೆಲಕಚ್ಚಿ ಮರಗಳಾಗಿ ಮೂಲ ಮರ ಯಾವುದೆಂದು ತಿಳಿಯದಂತಹ ಪರಿಸ್ಥಿತಿ. ಮರದ ರೆಂಬೆಗಳು ಕಲಾತ್ಮಕವಾಗಿ ನೃತ್ಯ ಮಾಡುವ ಕೈಗಳಂತೆ ಚಾಚಿದ್ದವು. ಹಲವಾರು ದೊಡ್ಡ ದೊಡ್ಡ ಕೊಂಬೆಗಳು ನೆಲಕ್ಕೆ ತಾಗಿ ಅಲ್ಲೇ ಬೇರೂರಿ ಮತ್ತೆ ಮುಂದೆ ಚಾಚಿ ಹೊಸ ಮರಗಳಾಗಿದ್ದವು. ಆ ಆಲದ ಮರ ಪಕ್ಷಿ ಸಂಕುಲಕ್ಕೆ ಆಶ್ರಯ ತಾಣವಾಗಿತ್ತು. ಮಂಗಗಳೂ ನೆಮ್ಮದಿಯಿಂದ ಅಲ್ಲಿ ನೆಗೆದಾಡುತ್ತಿದ್ದವು.  ನಾವು ಅಂತಹ ದೊಡ್ಡ ಆಲದ ಮರ ನೋಡಿದ್ದು ಅದೇ ಮೊದಲು. ನಮ್ಮಂತೆ ಬಹಳಷ್ಟು ಜನರು ಅಲ್ಲಿಗೆ ಸುತ್ತಾಡಲು ಬಂದಿದ್ದರು. ಒಮ್ಮೆ ಎಲ್ಲಾ ಕಡೆ ಸಂತೋಷದಿಂದ ಸುತ್ತಾಡಿಕೊಂಡು ಬಂದು, ಅದರ ಕೊಂಬೆಗಳಿಗೆ ಆತುಕೊಂಡು ಫೋಟೋ ಕ್ಲಿಕ್ಕಿಸಿಕೊಂಡೆವು. ಆವಾಗ ಅಲ್ಲಿ ಅಂಗಡಿ, ಹೋಟೆಲುಗಳು ಇರಲಿಲ್ಲ. ನಾವು ಒಂದು ಕಡೆ ಬಟ್ಟೆ ಹಾಸಿ ಕುಳಿತು ಬುತ್ತಿ ಊಟ ಮಾಡಿ, ನಮ್ಮಲ್ಲಿಗೆ ನೆಂಟರಿಷ್ಟರು ಬಂದಾಗ ಕರೆದುಕೊಂಡು ಬಂದು ತೋರಿಸಬಹುದು ಎನ್ನುವ ಸಂತಸದೊಂದಿಗೆ ಮನೆಗೆ ಹಿಂತಿರುಗಿದೆವು.

ಪಿಲ್ಲಲಮರ್ರಿ ನಮ್ಮ ದೇಶದಲ್ಲೇ ಎರಡನೆಯ ಅತಿ ದೊಡ್ಡ ಆಲದ ಮರವಾಗಿದೆ. ಮೊದಲನೆಯ ದೊಡ್ಡ ಮರ ಕೋಲ್ಕತ್ತಾದಲ್ಲಿದೆ. ನಾವು ಎಂದೂ ಮರೆಯದ ಈ ಪಿಲ್ಲಲಮರ್ರಿ ಇತ್ತೀಚೆಗೆ ದುಃಸ್ಥಿತಿಯಲ್ಲಿದೆ ಎಂದು ವರದಿಯಾಗಿದೆ. ಭಾರೀ ಮಟ್ಟದಲ್ಲಿ ಗೆದ್ದಲುಹುಳುಗಳು ಮರವನ್ನು ತಿಂದು ಪೊಳ್ಳುಮಾಡುತ್ತಿವೆಯಂತೆ. ಅರಣ್ಯ ಇಲಾಖೆ ಮತ್ತು ಮರತಜ್ಞರ ತಂಡ ಮರಗಳ ಆರೈಕೆಯಲ್ಲಿ ತೊಡಗಿವೆ ಎಂಬ ಮಾಹಿತಿಯೂ ಇದೆ. ಆ ಮರ ಬೇಗ ಗೆಲುವಾಗಲಿ, ಮೊದಲಿನಂತೆ ಅಲ್ಲಿ ಹಕ್ಕಿ, ಅಳಿಲು, ಮಂಗಗಳು ನಲಿದಾಡುತ್ತ ಪ್ರವಾಸಿ ತಾಣವಾಗಿ ಉಳಿಯಲಿ ಎಂದು ಹಾರೈಸೋಣ. ■